

# ಗರ್ಭಕೋಶ ಜಾರುವಿಕೆ

**ಮುಟ್ಟು ನಿಂತ ಮಹಿಳೆಯರಲ್ಲಿ ಗರ್ಭಕೋಶ ಜಾರುವಿಕೆ ಸಾಮಾನ್ಯ ಸಮಸ್ಯೆ. ಶಸ್ತ್ರಚಿಕಿತ್ಸೆ ಮೂಲಕ ಇದನ್ನು ಸರಿಪಡಿಸಲು ಸಾಧ್ಯವಿದೆ. ಹೆಣ್ತನದ ಹಾರ್ಮೋನ್ ಆಗಿರುವ ಈಸ್ಟ್ರೋಜನ್ ಮಟ್ಟ ಕಡಿಮೆಯಾಗಿ ಗರ್ಭಕೋಶ ಜಾರುತ್ತಾ ಬರಬಹುದು. ಇದನ್ನು ವೈದ್ಯಕೀಯ ಭಾಷೆಯಲ್ಲಿ ಯುಟೆರಲ್ ಪ್ರೊಲಾಪ್ಸ್ ಎನ್ನುತ್ತಾರೆ.**

■ ಡಾ. ವೀಣಾ ಎಸ್. ಭಟ್

ಐವತ್ತು ವರ್ಷ ಕಳೆದ ಭದ್ರಾವತಿಯ ಉಷಾ ಅವರಿಗೆ ಮುಟ್ಟು ನಿಂತು ಅನೇಕ ದಿನಗಳಾಗಿವೆ. ಆದರೂ ಋತುಸ್ರಾವದ ಸಮಯದಲ್ಲಿ ಬರುವಂತೆ ಬಿಳಿ, ಕೆಂಪು ಬಣ್ಣದ ದ್ರವ ಸೋರುತ್ತಿತ್ತು. ಸಂಕೋಚದಿಂದಲೇ ನನ್ನ ಬಳಿ ತಪಾಸಣೆಗೆ ಬಂದ ಉಷಾ ಅವರನ್ನು ಕೂಲಂಕಷವಾಗಿ ಪರೀಕ್ಷಿಸಿದಾಗ ಈಕೆಯ ಗರ್ಭಕೋಶ ಜಾರಿ ಕೆಳಗೆ ಬಂದಿರುವುದು ನನ್ನ ಗಮನಕ್ಕೆ ಬಂತು. ಜೊತೆಗೆ ಗರ್ಭಕೊರಳಿನಲ್ಲಿ ಹುಣ್ಣು ಕೂಡ ಆಗಿ ರಕ್ತಸ್ರಾವವೂ ಆಗುತ್ತಿತ್ತು. ಇವರಿಗೆ ಶಸ್ತ್ರಚಿಕಿತ್ಸೆ ನಡೆಸಿದೆ. ಈಗ ಉಷಾ ಆರಾಮವಾಗಿದ್ದಾರೆ.

ಅರವತ್ತು ವರ್ಷದ ಸಾವಿತ್ರಮ್ಮ ಅವರಿಗೂ ಗರ್ಭಕೋಶದ್ದೇ ಸಮಸ್ಯೆ. ಇವರು ಮೂತ್ರವಿಸರ್ಜನೆ ಮಾಡಲು ಹೋಗುವಾಗ ಬಹಳ ತೊಂದರೆ ಅನುಭವಿಸುತ್ತಿದ್ದರು. ಚಿಕಿತ್ಸೆಗಾಗಿ ನನ್ನ ಬಳಿ ಬಂದಾಗ ಪರೀಕ್ಷಿಸಿದೆ. ಗರ್ಭಕೋಶದ ಜೊತೆಗೆ ಮೂತ್ರಕೋಶವೂ ಕೆಳಗೆ ಜಾರಿತ್ತು. ಈಕೆಗೂ ಶಸ್ತ್ರಚಿಕಿತ್ಸೆಯನ್ನೇ ಮಾಡಬೇಕಾಯಿತು. ಸಾವಿತ್ರಮ್ಮ ಈಗ ಸಂಪೂರ್ಣ ಗುಣಮುಖರಾಗಿದ್ದಾರೆ.

ಈ ಮೇಲಿನ ಎರಡು ಉದಾಹರಣೆಗಳಲ್ಲಿ ಮಹಿಳೆಯರನ್ನು ಕಾಡಿದ್ದು ಗರ್ಭಕೋಶ ಜಾರಿಳಿತ ಸಮಸ್ಯೆ. ಆಂಗ್ಲ ಭಾಷೆಯಲ್ಲಿ 'ಯುಟೆರಲ್ ಪ್ರೊಲಾಪ್ಸ್' ಎಂದು ಕರೆಯುವ ಈ ತೊಂದರೆ ಮುಟ್ಟು ನಿಂತ ಮಹಿಳೆಯರಲ್ಲಿ ಸಾಮಾನ್ಯವಾಗಿ ಕಂಡುಬರುತ್ತದೆ.

ನಮ್ಮ ಸಂತಾನವನ್ನು ನವಮಾಸಗಳು ಸಂರಕ್ಷಿಸುವ ಗರ್ಭಕೋಶ, ಹೊಟ್ಟೆಯ ತಳಭಾಗದಲ್ಲಿರುವ ಕಿಳ್ಗುಳಿ/ಅಸ್ಥಿಕುಹರದಲ್ಲಿ ಸುರಕ್ಷಿತವಾಗಿರುತ್ತದೆ. ಇದರ ಮುಂಭಾಗದಲ್ಲಿ ಮೂತ್ರಕೋಶವಿದ್ದು, ಹಿಂಭಾಗದಲ್ಲಿ ಮಲಕೋಶ (ರೆಕ್ಟಮ್) ಇರುತ್ತದೆ. ಈ ಗರ್ಭಕೋಶವನ್ನು ವಿಶೇಷವಾದ ತಂತುಗಟ್ಟುಗಳು (ಲಿಗಮೆಂಟ್ಸ್) ಕಿಳ್ಗುಳಿಯೊಳಗೆ ಹಿಡಿದಿಟ್ಟಿವೆ. ಹಾಗಾಗಿ ಮಹಿಳೆಯರು ಭಾರವನ್ನು ಎತ್ತಿದಾಗ, ಕುಕ್ಕರಗಾಲಿನಲ್ಲಿ ಕೂತಾಗ ಕೆಮ್ಮಿ, ಸೀನಿ ಮಾಡಿದಾಗ ಗರ್ಭ ಧರಿಸಿದಾಗ ಗರ್ಭಕೋಶ ಸ್ವಸ್ಥಾನದಲ್ಲೇ ಇದ್ದು ಯೋನಿಯಿಂದ ಹೊರಗೆ ಜಾರುವುದಿಲ್ಲ. ಆದರೆ ಎರಡು ಅಥವಾ ಹೆಚ್ಚು ಸಹಜ ಹೆರಿಗೆ ಆದ ಮಹಿಳೆಯರಲ್ಲಿ ಗರ್ಭಕೋಶ ಸ್ವಸ್ಥಾನದಿಂದ ಜಾರಿ ಯೋನಿಯಿಂದ ಹೊರಗೆ ಬರುವುದಕ್ಕೆ 'ಗರ್ಭಕೋಶ ಜಾರಿಳಿತ ಅಥವಾ ಯುಟೆರಲ್ ಪ್ರೊಲಾಪ್ಸ್' ಎನ್ನುತ್ತೇವೆ.

## ಇದು ಹೇಗಾಗುತ್ತದೆ?

ವಯೋಸಹಜವಾಗಿ ಮುಟ್ಟು ನಿಂತ ಮೇಲೆ ಹೆಣ್ತನದ ಹಾರ್ಮೋನ್ ಆಗಿರುವ ಈಸ್ಟ್ರೋಜನ್ ಮಟ್ಟ ಕಡಿಮೆಯಾಗುತ್ತಾ ಬಂದು ಗರ್ಭಕೋಶ ಸಣ್ಣದಾಗುತ್ತಾ ಬರುತ್ತದೆ. ಜೊತೆಗೆ ಅದಕ್ಕೆ ಆಧಾರವಾಗಿರುವ ತಂತುಗಟ್ಟುಗಳ ಮತ್ತು ಸ್ನಾಯುಗಳ ಶಕ್ತಿಯು ಕಡಿಮೆಯಾಗುತ್ತಾ ಮೊದಮೊದಲು ಸ್ವಲ್ಪಸ್ವಲ್ಪವೇ ಜಾರುತ್ತಾ ಬಂದು ನಂತರ ಪೂರ್ಣವಾಗಿ ಜಾರುತ್ತವೆ. ಅಪರೂಪಕ್ಕೊಮ್ಮೆ ಜನ್ಮಜಾತ ಗುಣವೆಂಬಂತೆ ಕಿಳ್ಗುಳಿಯ (ಪೆಲ್ವಿಸ್) ತಂತುಗಟ್ಟುಗಳಲ್ಲಿ ದೌರ್ಬಲ್ಯ ಕಂಡುಬರಬಹುದು. ಇಂಥವರಲ್ಲಿ ಮಕ್ಕಳನ್ನು ಹೆರದಿದ್ದರೂ ಸಣ್ಣ ವಯಸ್ಸಿನಲ್ಲೇ ಗರ್ಭಕೋಶದ ಜಾರಿಳಿತ ಕಂಡುಬರಬಹುದು. ಇಂತಹ ಕೆಲವರಲ್ಲಿ ನರತಂತುಗಳಿಗೂ ತೊಂದರೆಯಾಗಿರಬಹುದು.

## ಕಾರಣವೇನು?

ಪದೇ ಪದೇ ಮಕ್ಕಳನ್ನು ಹಡೆದವರಲ್ಲಿ, ಮಕ್ಕಳ ನಡುವೆ ಅಂತರವಿರದಿದ್ದವರಲ್ಲಿ, ಹೆರಿಗೆಯ ನಂತರ ಸರಿಯಾಗಿ ವಿಶ್ರಾಂತಿ ತೆಗೆದುಕೊಳ್ಳದೇ ಇರುವವರಲ್ಲಿ, ದೀರ್ಘಾವಧಿ ಹೆರಿಗೆ, ಮಗು ದಪ್ಪನಾಗಿದ್ದು ಕಷ್ಟಕರ ಹೆರಿಗೆಯಲ್ಲಿ, ಗರ್ಭಕಂಠ